ಕುಶಾಲನಗರ ಯೋಜನಾ ಪ್ರಾಧಿಕಾರ ಕುಶಾಲನಗರ

ಕಾವೇರಿ ಬಡಾವಣೆ, ಸಂ.05, ಬ್ಲಾಕ್ ನಂ.01, ಕುಶಾಲನಗರ – 571234

Email Id: kushalnagaradtp@hotmail.com ದೂರವಾಣಿ ಸಂ: 08276–274040

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ.ಎಂ.ಎಂ. ಚರಣ್ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 08–11–2022 ರ ಮಂಗಳವಾರದಂದು ಪೂರ್ವಾಹ್ನ 11.30 ಗಂಟೆಗೆ ನಡೆದ ಪ್ರಾಧಿಕಾರದ 52 ನೇ ಸಾಮಾನ್ಯ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರು :–

1) ಶ್ರೀ ಎಂ.ಎಂ. ಚರಣ್, ಅಧ್ಯಕ್ಷರು
2) ಶ್ರೀ ವೈಶಾಖ್, ನಾಮನಿರ್ದೇಶಿತ ಸದಸ್ಯರು.
3) ಶ್ರೀ ಪುಂಡರೀಕಾಕ್ಷ, ನಾಮನಿರ್ದೇಶಿತ ಸದಸ್ಯರು
4) ಶ್ರೀ ಮಧುಸೂಧನ್, ನಾಮನಿರ್ದೇಶಿತ ಸದಸ್ಯರು
5) ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರು
6) ಮುಖ್ಯಾಧಿಕಾರಿಗಳು, ಪಟ್ಟಣಪಂಚಾಯಿತಿ, ಕುಶಾಲನಗರ
7) ಸದಸ್ಯ ಕಾರ್ಯದರ್ಶಿ, ಕುಶಾಲನಗರ ಯೋಜನಾ ಪ್ರಾಧಿಕಾರ

ವಿಷಯ ಸಂಖ್ಯೆ 01): ದಿನಾಂಕ: 16–09–2022 ರಂದು ನಡೆದ ಪ್ರಾಧಿಕಾರದ 51ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

ಟಿಪ್ಪಣಿ: ದಿನಾಂಕ: 16–09–2022 ರಂದು ನಡೆದ ಪ್ರಾಧಿಕಾರದ 51ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಒಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ: ಪ್ರಾಧಿಕಾರದ 51ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಸಭೆಯಲ್ಲಿ ಓದಿ, ಯಾವುದೇ ಆಕ್ಷೇಪಣೆ ವ್ಯಕ್ತವಾಗದ ಕಾರಣ ಸದರಿ ನಡವಳಿಗಳನ್ನು ಒಪ್ಪಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ 02): ಪ್ರಾಧಿಕಾರದ ಸೆಪ್ಟೆಂಬರ್ 2022 ರ ಮಾಹೆಯ ಜಮಾ ಮತ್ತು ಖರ್ಚುಗಳ ವಿವರವನ್ನು ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ: ಪ್ರಾಧಿಕಾರದ ಸೆಪ್ಟೆಂಬರ್ 2022 ರ ಮಾಹೆಯ ಜಮಾ ಮತ್ತು ಖರ್ಚುಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದ್ದು, ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

ನಿರ್ಣಯ: ಪ್ರಾಧಿಕಾರದ ಸೆಪ್ಟೆಂಬರ್ 2022 ರ ಮಾಹೆಯ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ 03): ದಿನಾಂಕ: 16–09–2022 ರಿಂದ 27–10–2022 ರವರೆಗೆ ಏಕ–ನಿವೇಶನ ವಿನ್ಯಾಸ ನಕ್ಷೆಗಳಿಗೆ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸದರಿ ಅನುಮೋದನೆಯನ್ನು ಸ್ಥಿರೀಕರಿಸಲು ಮಂಡಿಸಿರುವ ಬಗ್ಗೆ.

i. **ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 22/17 ರಲ್ಲಿನ 0.04 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (ಅರ್ಜಿದಾರರು:– ಶ್ರೀ ಟಿ.ಆರ್. ರಾಜು ಬಿನ್ ಪೌತಿ ರಂಗಯ್ಯ ಟಿ.ಟಿ).**

ಟಿಪ್ಪಣಿ: ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 22/17 ರಲ್ಲಿನ 0.04 ಎಕರೆ ವಿಸ್ತೀರ್ಣದ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ 218766 ದಿನಾಂಕ:24–03–2022 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಸ್ತಾವಿತ ಜಮೀನು ಅಂತಿಮ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿರುವುದಾಗಿ ಹಾಗೂ ಸದರಿ ಜಮೀನಿಗೆ 30.0 ಅಡಿ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಇರುತ್ತದೆ ಎಂದು ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ ಕುಶಾಲನಗರ ಇವರು ದಿನಾಂಕ:21–09–2021 ರಂದು ದೃಢೀಕರಣ ನೀಡಿರುತ್ತಾರೆ. ಅದರಂತೆ ಜಮೀನಿನ ಪೂರ್ವ ದಿಕ್ಕಿನಲ್ಲಿ 9.0ಮೀ ಅಗಲದ ಸಾರ್ವಜನಿಕ ರಸ್ತೆಗೆ ಲಗತ್ತಾಗಿರುವುದಾಗಿ ಹಿಂದಿನ ಸದಸ್ಯ ಕಾರ್ಯದರ್ಶಿಗಳು ವರದಿಸಿರುತ್ತಾರೆ. ಸದರಿ ಜಮೀನಿನ ವಸತಿ ಏಕನಿವೇಶನ ವಿನ್ಯಾಸ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 160.80 ಚ.ಮೀ (ಶೇ. 100.00%) ವಿಸ್ತೀರ್ಣದ ಪ್ರದೇಶವನ್ನು ನಿಗಧಿಪಡಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ದಿನಾಂಕ:26–09–2022 ರಂದು ಸದರಿ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಪ್ರಾಧಿಕಾರದಿಂದ ನೀಡಿರುವ ತಾಂತ್ರಿಕ ಅನುಮೋದನೆಯನ್ನು ಸ್ಥಿರೀಕರಿಸುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

ii. **ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 21/47 ರಲ್ಲಿನ 0.05 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (ಅರ್ಜಿದಾರರು: ಶ್ರೀ ಕೆ.ಎನ್. ಯೋಗೇಶ್ ಬಿನ್ ಕೆ.ಪಿ. ನಿಂಗೇಗೌಡ).**

ಟಿಪ್ಪಣಿ: ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 21/47 ರಲ್ಲಿನ 0.05 ಎಕರೆ ವಿಸ್ತೀರ್ಣದ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ 45125 ದಿನಾಂಕ:30–06–2020 ರಲ್ಲಿ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಸ್ತಾವಿತ ಜಮೀನು ಅಂತಿಮ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿರುವುದಾಗಿ ಹಾಗೂ ಪಶ್ಚಿಮ ದಿಕ್ಕಿನಲ್ಲಿ 7.50ಮೀ ಅಗಲದ ಪಂಚಾಯಿತಿ ರಸ್ತೆಗೆ ಲಗತ್ತಾಗಿರುವುದಾಗಿ ಹಿಂದಿನ ಸದಸ್ಯ ಕಾರ್ಯದರ್ಶಿಗಳು ವರದಿಸಿರುತ್ತಾರೆ. ಸದರಿ ಜಮೀನಿನ ವಸತಿ ಏಕನಿವೇಶನ ವಿನ್ಯಾಸ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 192.50 ಚ.ಮೀ (ಶೇ. 96.25%) ಮತ್ತು ರಸ್ತೆ ವಿಸ್ತರಣೆಗಾಗಿ 07.50 ಚ.ಮೀ (ಶೇ. 03.75%) ವಿಸ್ತೀರ್ಣದ ಪ್ರದೇಶವನ್ನು ನಿಗಧಿಪಡಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ದಿನಾಂಕ:06–10–2022 ರಂದು ಸದರಿ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಪ್ರಾಧಿಕಾರದಿಂದ ನೀಡಿರುವ ತಾಂತ್ರಿಕ ಅನುಮೋದನೆಯನ್ನು ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

iii. **ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 49/6 ರಲ್ಲಿನ 0.05.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (ಅರ್ಜಿದಾರರು: ಶ್ರೀ ಸುಖೇಶ್ ಹೆಚ್.ಎಸ್ ಬಿನ್ ಸೋಮಶೇಖರಾಚಾರಿ ಹೆಚ್.ಜಿ)**

ಟಿಪ್ಪಣಿ: ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 49/6 ರಲ್ಲಿನ 0.05.50 ಎಕರೆ ವಿಸ್ತೀರ್ಣದ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ ಭೂಪರಿ/223/13–14 ದಿನಾಂಕ:20–03–2014 ಹಾಗೂ 39402 ದಿನಾಂಕ: 23–08–2022 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಸ್ತಾವಿತ ಜಮೀನು ಅಂತಿಮ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿರುವುದಾಗಿ ಹಾಗೂ ಉತ್ತರ ದಿಕ್ಕಿನಲ್ಲಿ 7.50ಮೀ ಅಗಲದ ಪಂಚಾಯಿತಿ ರಸ್ತೆಗೆ ಲಗತ್ತಾಗಿರುವುದಾಗಿ ಹಿಂದಿನ ಸದಸ್ಯ ಕಾರ್ಯದರ್ಶಿಗಳು ವರದಿಸಿರುತ್ತಾರೆ. ಸದರಿ ಜಮೀನಿನ ಏಕ–ನಿವೇಶನ ವಿನ್ಯಾಸ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 194.82 ಚ.ಮೀ (ಶೇ. 87.53%)

ಮತ್ತು ರಸ್ತೆ ವಿಸ್ತರಣೆಗಾಗಿ 27.75 ಚ.ಮೀ (ಶೇ. 12.47%) ವಿಸ್ತೀರ್ಣದ ಪ್ರದೇಶವನ್ನು ನಿಗಧಿಪಡಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ದಿನಾಂಕ:06–10–2022 ರಂದು ಸದರಿ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಪ್ರಾಧಿಕಾರದಿಂದ ನೀಡಿರುವ ತಾಂತ್ರಿಕ ಅನುಮೋದನೆಯನ್ನು ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

ನಿರ್ಣಯ: ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ಮೇಲ್ಕಾಣಿಸಿದ ಕಡತಗಳಿಗೆ ತಾಂತ್ರಿಕ ಅನುಮೋದನೆ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ 04): ಮಾನ್ಯ ಉಚ್ಚನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ 11563/2022 (LB-RES) ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದ ಪರವಾಗಿ ವಕಾಲತ್ತು ವಹಿಸಿದ್ದ ವಕೀಲರಿಗೆ ಶುಲ್ಕವನ್ನು ಪಾವತಿಸುವ ಬಗ್ಗೆ.

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಉಚ್ಚನ್ಯಾಯಾಲಯದಲ್ಲಿ ಶ್ರೀ ಪೊನ್ನಪ್ಪ ಎಂ.ಎಂ. ಇವರು ಸರ್ಕಾರದ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ಮತ್ತು ಇತರರ ವಿರುದ್ಧ ರಿಟ್ ಅರ್ಜಿ ಸಂಖ್ಯೆ 11563/2022 (LB-RES) ದಾಖಲಿಸಿದ್ದು, ಸದರಿ ರಿಟ್ ಅರ್ಜಿಯಲ್ಲಿ ಪ್ರಾಧಿಕಾರವನ್ನು 5ನೇ ಪ್ರತಿವಾದಿಯನ್ನಾಗಿಸಿರುತ್ತಾರೆ. ಅದರಂತೆ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ:08–08–2022 ರ ಪ್ರಾಧಿಕಾರದ ಪತ್ರದಲ್ಲಿ ಪ್ರಾಧಿಕಾರದ ಪರವಾಗಿ ವಕಾಲತ್ತು ವಹಿಸಲು ಶ್ರೀಮತಿ ಜೆ. ಕಲಾದೀಪ, ವಕೀಲರು ಇವರಿಗೆ ತಿಳಿಸಲಾಗಿದ್ದು, ಅದರಂತೆ ಸದರಿಯವರು ಪ್ರಾಧಿಕಾರದ ಪರ ವಕಾಲತ್ತು ವಹಿಸಿದ್ದು, ದಿನಾಂಕ:21–09–2022 ರಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚನ್ಯಾಯಾಲಯವು ಆದೇಶ ನೀಡಿರುತ್ತದೆ. ಪ್ರಾಧಿಕಾರದ ಪರವಾಗಿ ವಕಾಲತ್ತು ವಹಿಸಿದ ಶುಲ್ಕ ರೂ. 10,000/– ಗಳನ್ನು ಪಾವತಿಸುವಂತೆ ವಕೀಲರು ದಿನಾಂಕ:19–10–2022 ರ ಪತ್ರದಲ್ಲಿ ಕೋರಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀ ಎಂ.ಎಂ. ಪೊನ್ನಪ್ಪ ಇವರು (ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 11563/2022 [LB-RES]) ಪ್ರಾಧಿಕಾರವನ್ನು 5ನೇ ಎದುರುದಾರರನ್ನಾಗಿಸಿದ್ದು, ಪ್ರಕರಣಕ್ಕೆ ಖಾಸಗಿ ವಕೀಲರು ಪ್ರಾಧಿಕಾರದ ಪರವಾಗಿ ಮಾನ್ಯ ಉಚ್ಚನ್ಯಾಯಾಲಯದಲ್ಲಿ ವಕಾಲತ್ತು ವಹಿಸಿಕೊಂಡಿದ್ದು, ಪ್ರಸ್ತುತ ಪ್ರಕರಣವು ಮುಗಿದಿರುವುದರಿಂದ ವಕಾಲತ್ತು ವಹಿಸಿದ ಶುಲ್ಕ ರೂ. 10,000/– ಗಳನ್ನು ವಕೀಲರಿಗೆ ಪಾವತಿಸಬಹುದಾಗಿದ್ದು ವಿಷಯವನ್ನು ಚರ್ಚೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

ನಿರ್ಣಯ: ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದ ಪರವಾಗಿ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಶ್ರೀಮತಿ ಜೆ. ಕಲಾದೀಪ, ವಕೀಲರು ಇವರು ವಕಾಲತ್ತು ವಹಿಸಿಕೊಂಡಿದ್ದು, ಪ್ರಸ್ತುತ ಪ್ರಕರಣವು ನ್ಯಾಯಾಲಯದಲ್ಲಿ ಇತ್ಯರ್ಥವಾಗಿರುವುದರಿಂದ ವಕಾಲತ್ತು ಶುಲ್ಕ ರೂ. 10,000/–ಗಳನ್ನು ವಕೀಲರಿಗೆ ಪಾವತಿಸಲು ಸಭೆಯು ಸರ್ವಾನುಮತದಿಂದ ಒಪ್ಪಿ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ 05): ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ, 1ನೇ ಬ್ಲಾಕ್, ಬೈಚನಹಳ್ಳಿ ಗ್ರಾಮದ ಸ.ನಂ. 115/1 ರಲ್ಲಿ ಅನಧಿಕೃತವಾಗಿ ಲೇಔಟ್ ನಿರ್ಮಾಣ ಹಾಗೂ ಅನಧಿಕೃತ ಕಟ್ಟಡ ಕಾಮಗಾರಿ ಮಾಡುತ್ತಿರುವ ಬಗ್ಗೆ ಶ್ರೀ ಡಿ.ಸಿ. ಜಗದೀಶ್ ಬಿನ್ ಚಂದ್ರಶೇಖರ್ ಇವರು ಮಾನ್ಯ ಉಚ್ಚನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂ: 5656/2022 (LB-RES) ಸಲ್ಲಿಸಿರುವ ಬಗ್ಗೆ.

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚನ್ಯಾಯಾಲಯ, ಕರ್ನಾಟಕ, ಬೆಂಗಳೂರು ರಿಟ್ ಅರ್ಜಿ ಸಂಖ್ಯೆ 5656/2022 (LB-RES) ದಿನಾಂಕ:01–04–2022ರ ಆದೇಶದನ್ವಯ ಪ್ರತಿವಾದಿಗಳಾದ ಶ್ರೀ ಕೆ.ಎಂ. ಜಗದೀಶ್ ಬಿನ ಲೇಟ್ ಮಲ್ಲೇಗೌಡ, ಶ್ರೀ ಎ.ಎಂ. ವಿಶ್ವನಾಥ್ ಬಿನ್ ಎ.ಆರ್. ಮುತ್ತಣ್ಣ ಹಾಗೂ ಶ್ರೀ ಬಿ.ಜೆ. ಶಮಂತ್ ಬಿನ್ ಬಿ.ಎ. ಜೀವಿಜಯ ಇವರುಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ

ಪ್ರಾಧಿಕಾರ ನಿಯಮಗಳು 1965ರ ನಿಯಮ 37(3) ರಂತೆ ರಚಿಸಲಾಗಿರುವ ಸಮಿತಿಯು ವಿವಿಧ ದಿನಾಂಕದಂದು ತೆಗೆದುಕೊಂಡ ನಿರ್ಣಯಗಳಂತೆ ಪ್ರಾಧಿಕಾರದಿಂದ ನೋಟೀಸು ನೀಡಿದ್ದು, ಅಂತಿಮವಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15(4) ಮತ್ತು 17(4) ರನ್ವಯ ಪ್ರಾಧಿಕಾರದ ನೋಟೀಸ್ ಸಂಖ್ಯೆ ಕುಯೋಪ್ರಾ/ಸಕಾ/ಅನಧಿಕೃತ ಬಡಾವಣೆ/2022–23/164 ದಿನಾಂಕ: 26–07–2022 ರಲ್ಲಿ **"ವಿನ್ಯಾಸ ನಕ್ಷೆ ಅನುಮೋದನೆ ಪಡೆಯದೇ ಜಮೀನಿನಲ್ಲಿ ಅಭಿವೃದ್ಧಿಪಡಿಸಿರುವ ರಸ್ತೆ, ಚರಂಡಿ, ವಿದ್ಯುತ್ ಸಂಪರ್ಕ ಹಾಗೂ ಕಾಂಪೌಂಡ್ ಕಾಮಗಾರಿಯನ್ನು ಈ ನೋಟೀಸು ತಲುಪಿದ ಹತ್ತು ದಿನಗಳ ಒಳಗೆ ಎದುರುದಾರರು ಸ್ವಯಂ ತೆರವುಗೊಳಿಸಿ ಭೂಮಿಯನ್ನು ಅದರ ಮೂಲ ಸ್ಥಿತಿಗೆ ಮರುಸ್ಥಾಪಿಸುವಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 15(4), 17(4) ರಡಿ ಸೂಚಿಸಿ ನೋಟೀಸು ನೀಡಲಾಗಿದೆ. ತಪ್ಪಿದಲ್ಲಿ ಯೋಜನಾ ಪ್ರಾಧಿಕಾರದಿಂದ ತೆರವು ಕಾರ್ಯಾಚರಣೆ ನಡೆಸುವುದಾಗಿ ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ತಾವುಗಳು ಭರಿಸಲು ಬದ್ಧರಿರುವಂತೆ ಸೂಚಿಸಿ ನೋಟೀಸ್ ನೀಡಲಾಗಿದೆ.**

ದಿನಾಂಕ:20–08–2022 ರಂದು ನಡೆದ ಪ್ರಾಧಿಕಾರದ ಸಮಿತಿ ಸಭೆಯ ನಿರ್ಣಯದಂತೆ ಪ್ರಾಧಿಕಾರದ ನೋಟೀಸು ಸಂಖ್ಯೆ: ಕುಯೋಪ್ರಾ/ಸಕಾ/ಅನಧಿಕೃತ ಬಡಾವಣೆ/2022–23/247 ದಿನಾಂಕ:01–09–2022 ರಂದು ಜಮೀನಿನ ಮೂಲ ಮಾಲೀಕರಾದ ಶ್ರೀ ತೆಕ್ಕೆರುಂಬಿಲ್ ವಿಜಯನ್ ಸಂದೀಪ್, ಶ್ರೀ ತೆಕ್ಕೆರುಂಬಿಲ್ ರಾಮನ್ ವಿಜಯ ಮತ್ತು ಶ್ರೀಮತಿ ತೆಕ್ಕೆರುಂಬಿಲ್ ವಿಜಯಲೆಲಿದಾ ಇವರುಗಳಿಗೆ **"ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ (15) ಮತ್ತು (17) ರನ್ವಯ ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸ.ನಂ. 115/1 ಮತ್ತು 145 ರ ಜಮೀನಿನ ಅಭಿವೃದ್ಧಿಗೆ ಅನುಮತಿ ಪಡೆದಿರುವ ಬಗ್ಗೆ ದಾಖಲೆಗಳನ್ನು ನೋಟೀಸು ಪತ್ರ ತಲುಪಿದ 10 ದಿನಗಳ ಒಳಗೆ ಪ್ರಾಧಿಕಾರದ ಕಛೇರಿಗೆ ಸಲ್ಲಿಸುವಂತೆ ತಪ್ಪಿದಲ್ಲಿ ಮುಂದಿನ ಕಾನೂನು ಕ್ರಮಕೈಗೊಳ್ಳುವುದಾಗಿ ಸೂಚಿಸಿ"** ಪ್ರಾಧಿಕಾರದಿಂದ ನೋಟೀಸ್ ನೀಡಿದ್ದು, ಸದರಿ ನೋಟೀಸನ್ನು ದಿನಾಂಕ:15–09–2022 ರಂದು ಸ್ವೀಕರಿಸಿದ್ದು ಇದುವರೆವಿಗೂ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ.

ಈ ಮಧ್ಯೆ ಶ್ರೀ ಕೆ.ಎಂ. ಜಗದೀಶ್ ಬಿನ್ ಮಲ್ಲೇಗೌಡ, ಶ್ರೀ ಎ.ಎಂ. ವಿಶ್ವನಾಥ್ ಬಿನ್ ಆರ್. ಮುತ್ತಣ್ಣ ಹಾಗೂ ಶ್ರೀ ಬಿ.ಜೆ. ಶಮಂತ್ ಬಿನ್ ಬಿ.ಎ. ಜೀವಿಜಯ ಇವರುಗಳು ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ. 18340/2022 (LB-RES) ರಲ್ಲಿ ದಾವೆ ಹೂಡಿ ಪ್ರಾಧಿಕಾರವನ್ನು 1ನೇ ಎದರುದಾರರನ್ನಾಗಿ ಹಾಗೂ ಸದಸ್ಯಕಾರ್ಯದರ್ಶಿಯನ್ನು 2ನೇ ಎದುರುದಾರರನ್ನಾಗಿ ಮಾಡಲಾಗಿದೆ. ಸದರಿ ಪ್ರಕರಣದ ಬಗ್ಗೆ ಮಾನ್ಯ ಉಚ್ಚನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಪರಿಶೀಲಿಸಲಾಗಿ, ವಾದಿಗಳಾದ ಶ್ರೀ ಕೆ.ಎಂ. ಜಗದೀಶ್ ಬಿನ್ ಮಲ್ಲೇಗೌಡ, ಶ್ರೀ ಎ.ಎಂ. ವಿಶ್ವನಾಥ್ ಬಿನ್ ಆರ್. ಮುತ್ತಣ್ಣ ಹಾಗೂ ಶ್ರೀ ಬಿ.ಜೆ. ಶಮಂತ್ ಬಿನ್ ಬಿ.ಎ. ಜೀವಿಜಯ ಇವರುಗಳಿಗೆ ಪ್ರಾಧಿಕಾರದಿಂದ ದಿನಾಂಕ: 26–07–2022 ರಂದು ನೀಡಲಾಗಿದ್ದ ನೋಟೀಸಿಗೆ ದಿನಾಂಕ:15–09–2022 ರಂದು ಮಾನ್ಯ ಉಚ್ಚನ್ಯಾಯಾಲಯವು ತಡೆಯಾಜ್ಞೆ ನೀಡಿರುವುದು ಕಂಡುಬಂದಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಸಭೆಯ ಅವಗಾಹನೆಗೆ ತರುತ್ತಾ, ಚರ್ಚೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

ಚರ್ಚೆ: ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಪ್ರಕರಣದ ಕುರಿತು ಸದಸ್ಯ ಕಾರ್ಯದರ್ಶಿಗಳು ಟಿಪ್ಪಣಿಯನ್ನು ಸಭೆಗೆ ಓದಿ ವಿವರಿಸಿದರು. ಈ ಬಗ್ಗೆ ಸದಸ್ಯರಾದ ಶ್ರೀ ಮಧುಸೂಧನ್ ಇವರು ಸದಸ್ಯ ಕಾರ್ಯದರ್ಶಿಗಳ ಅಭಿಪ್ರಾಯ ನೀಡುವಂತೆ ಕೋರಿದರು. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬೈಚನಹಳ್ಳಿ ಗ್ರಾಮದ ಸ.ನಂ. 115/1 ರಲ್ಲಿ ಅಭಿವೃದ್ಧಿಪಡಿಸಿರುವುದನ್ನು ತೆರವುಗೊಳಿಸಲು ದಿನಾಂಕ:26–07–2022 ರಂದು ಪ್ರಾಧಿಕಾರದಿಂದ ನೀಡಿರುವ ನೋಟೀಸಿಗೆ ಮಾನ್ಯ ಉಚ್ಚನ್ಯಾಯಾಲಯದಲ್ಲಿ ತಡೆಯಾಜ್ಞೆ ನೀಡಲಾಗಿರುತ್ತದೆ. ಆದ್ದರಿಂದ ಸದರಿ ಸ್ವತ್ತಿಗೆ ದಿನಾಂಕ:01–09–2022 ರಂದು ಪ್ರಾಧಿಕಾರದಿಂದ ಮೂಲ ಮಾಲೀಕರಿಗೆ ನೀಡಿರುವ ನೋಟೀಸಿಗೆ ಸಂಬಂಧಿಸಿದಂತೆ ಕ್ರಮವಹಿಸುವ ಪೂರ್ವದಲ್ಲಿ ಕಾನೂನು ಅಭಿಪ್ರಾಯ ಪಡೆಯುವುದು ಸೂಕ್ತವೆಂದು

ಸದಸ್ಯಕಾರ್ಯದರ್ಶಿ ಅಭಿಪ್ರಾಯ ವ್ಯಕ್ತಪಡಿಸಿದರು. ಮುಂದುವರೆದು, ಸದಸ್ಯರಾದ ಶ್ರೀ ಅಮೃತ್‌ರಾಜ್ ಇವರು ಮಾತನಾಡಿ ದಿನಾಂಕ:01–09–2022 ರಂದು ಪ್ರಾಧಿಕಾರದಿಂದ ಜಮೀನಿನ ಮೂಲ ಮಾಲೀಕರಿಗೆ ನೀಡಲಾಗಿರುವ ನೋಟೀಸ್‌ರನ್ವಯ ಮುಂದಿನ ಕ್ರಮವಹಿಸುವುದು ಸೂಕ್ತವೆಂದು ಹಾಗೂ ಇದಕ್ಕೂ ನ್ಯಾಯಾಲಯದಿಂದ ನೀಡಿರುವ ತಡೆಯಾಜ್ಞೆಗೂ ಯಾವುದೇ ಸಂಬಂಧ ಇಲ್ಲವೆಂದು ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 15 ಮತ್ತು 17 ಅನ್ನು ಉಲ್ಲಂಘಿಸಿದಂತಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದಕ್ಕೆ ಸದಸ್ಯರಾದ ಶ್ರೀ ವೈಶಾಖ್ ಇವರು ದನಿಗೂಡಿಸಿದರು. ಉಳಿದಂತೆ ಅಧ್ಯಕ್ಷರು ಮಾತನಾಡಿ ಸದರಿ ಸ್ವತ್ತಿನಲ್ಲಿ ಕೈಗೊಂಡಿರುವ ಅಭಿವೃದ್ಧಿಯನ್ನು ತೆರವುಗೊಳಿಸಲು ದಿನಾಂಕ:26–07–2022 ರಂದು ಪ್ರಾಧಿಕಾರದಿಂದ ನೀಡಿರುವ ನೋಟೀಸಿಗೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದರಿಂದ ಈ ಹಂತದಲ್ಲಿ ತೆರವು ಕಾರ್ಯಾಚರಣೆ ಕೈಗೊಳ್ಳುವುದು ಸೂಕ್ತವಲ್ಲವೆಂದು ತಿಳಿಸಿದರು. ಇದಕ್ಕೆ ಉಳಿದ ಸದಸ್ಯರಾದ ಶ್ರೀ ಮಧುಸೂಧನ್, ಶ್ರೀ ಪುಂಡರೀಕಾಕ್ಷ ಹಾಗೂ ಮುಖ್ಯಾಧಿಕಾರಿಗಳು ಪಟ್ಟಣಪಂಚಾಯಿತಿ ಇವರು ದನಿಗೂಡಿಸಿದರು.

ನಿರ್ಣಯ: ಸದರಿ ಸ್ವತ್ತಿನಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯವನ್ನು ತೆರವುಗೊಳಿಸುವಂತೆ ದಿನಾಂಕ:26–07–2022 ರಂದು ಪ್ರಾಧಿಕಾರದಿಂದ ನೀಡಿರುವ ನೋಟೀಸಿಗೆ ಮಾನ್ಯ ಉಚ್ಚನ್ಯಾಯಾಲಯವು ತಡೆಯಾಜ್ಞೆ ನೀಡಿರುವುದರಿಂದ ಈ ಹಂತದಲ್ಲಿ ಸದರಿ ಸ್ವತ್ತಿನಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯವನ್ನು ತೆರವುಗೊಳಿಸಲು ಕ್ರಮಕೈಗೊಳ್ಳುವುದು ಸೂಕ್ತವಲ್ಲವೆಂದು ಹಾಗೂ ನ್ಯಾಯಾಲಯದ ಮುಂದಿನ ಆದೇಶದಂತೆ ಕ್ರಮಕೈಗೊಳ್ಳುವುದು ಸೂಕ್ತವೆಂದು ಸಭೆಯಲ್ಲಿ ಬಹುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ 06): ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು:

(ಅ): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 93 ರಲ್ಲಿನ 4.41 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ (ಅರ್ಜಿದಾರರು:– ಶ್ರೀ ಎಂ.ಕೆ. ರವೀಂದ್ರ).

ಚರ್ಚೆ: ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಅಧ್ಯಕ್ಷರು ಗುಮ್ಮನಕೊಲ್ಲಿ ಗ್ರಾಮದ ಸ.ನಂ. 93 ರಲ್ಲಿನ 4.41 ಎಕರೆ ವಿಸ್ತೀರ್ಣದ ಜಮೀನಿನ ಬಹುನಿವೇಶನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿ ಪ್ರಾಧಿಕಾರಕ್ಕೆ ಸಲ್ಲಿಕೆಯಾಗಿರುವ ಪ್ರಸ್ತಾವನೆಯನ್ನು ಅನುಮೋದಿಸಲು ಪ್ರಸ್ತಾಪಿಸಿದರು. ಈ ಸಂಬಂಧ ಕಡತವನ್ನು ಸಭೆಯಲ್ಲಿ ಪರಿಶೀಲಿಸಲಾಗಿ, ಸರ್ವೆ ನಕ್ಷೆಯನ್ನು ನೀಡುವಂತೆ ಭೂದಾಖಲೆಗಳ ಸಹಾಯಕ ನಿರ್ದೇಶಕರಿಗೆ ಪ್ರಾಧಿಕಾರದಿಂದ ಪತ್ರ ಬರೆದಿದ್ದು, ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯನ್ನು ದಿನಾಂಕ:08–11–2022ರಂದು ಅರ್ಜಿದಾರರು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ ಎಂದು ಸದಸ್ಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು. ಈ ಬಗ್ಗೆ ಎಲ್ಲಾ ಸದಸ್ಯರು ಕಡತವನ್ನು ಪರಿಶೀಲಿಸಿ ಸದರಿ ಜಮೀನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ಇವರಿಂದ ವಸತಿ ಉದ್ದೇಶಕ್ಕೆ ಭೂಪರಿವರ್ತನೆಗೊಂಡಿದ್ದು, ಸದರಿ ಜಮೀನಿನ ದಕ್ಷಿಣಕ್ಕೆ ಹಾಲಿ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ವಸತಿ ವಿನ್ಯಾದಲ್ಲಿನ 9.0ಮೀ ಅಗಲದ ರಸ್ತೆಯಿಂದ ಸಂಪರ್ಕ ಹೊಂದಿರುವುದರಿಂದ ಮಹಾಯೋಜನೆಯಲ್ಲಿರುವ ಪ್ರಸ್ತಾವನೆಗಳನ್ನು ಅಳವಡಿಸಿಕೊಂಡು ವಲಯ ನಿಯಮಾವಳಿಯಂತೆ ಭೂಉಪಯೋಗವನ್ನು ಕಾಯ್ದಿರಿಸಿ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 17(2ಎ) ಮತ್ತು ಅನುಮೋದಿತ ವಲಯ ನಿಯಮಾವಳಿಯ ಅಧ್ಯಾಯ 34(ಎ) ರ ಅವಕಾಶದನ್ವಯ ವಸತಿ ಬಹುನಿವೇಶನ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಬಹುದೆಂದು ಸುಧೀರ್ಘವಾಗಿ ಚರ್ಚಿಸಲಾಯಿತು.

ನಿರ್ಣಯ: ಸದರಿ ಜಮೀನು ಅನುಮೋದಿತ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದ್ದು, ವಸತಿ ಉದ್ದೇಶಕ್ಕೆ ಭೂಪರಿವರ್ತನೆಗೊಂಡಿರುವುದರಿಂದ ಹಾಗೂ 9.0ಮೀ ಅಗಲದ ಬಡಾವಣೆ ರಸ್ತೆಯಿಂದ ಸಂಪರ್ಕ ಹೊಂದಿರುವುದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17(2ಎ)

ಮತ್ತು ಅನುಮೋದಿತ ವಲಯ ನಿಯಮಾವಳಿಯ ಅಧ್ಯಾಯ 34(ಎ) ರ ಅವಕಾಶದನ್ವಯ ವಸತಿ ಬಹುನಿವೇಶನ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿ ಸದಸ್ಯ ಕಾರ್ಯದರ್ಶಿಯವರಿಗೆ ಮುಂದಿನ ಅಗತ್ಯ ಕ್ರಮಕ್ಕೆಗೊಳ್ಳಲು ಸೂಚಿಸಲಾಯಿತು.

(ಅ): ಕುಶಾಲನಗರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯನ್ನು ವಿಸ್ತರಿಸುವ ಬಗ್ಗೆ.

ಚರ್ಚೆ: ಕುಶಾಲನಗರ ಪಟ್ಟಣವು ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಪಟ್ಟಣವಾಗಿದ್ದು, ಕೊಡಗು ಜಿಲ್ಲೆಯಲ್ಲಿ ಕುಶಾಲನಗರವು ಬಹುತೇಕ ಸಮತಟ್ಟು ಪ್ರದೇಶವಾಗಿರುವುದರಿಂದ ಪಟ್ಟಣವು ಅಭಿವೃದ್ಧಿಹೊಂದಲು ಪೂರಕವಾಗಿರುತ್ತದೆ ಹಾಗೂ ಕುಶಾಲನಗರ ಪಟ್ಟಣ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸಲು ಅಂದರೆ ಪುರಸಭೆಯನ್ನಾಗಿಸುವ ಕಾರ್ಯವು ಈಗಾಗಲೇ ಪ್ರಗತಿಯಲ್ಲಿದ್ದು, ಕುಶಾಲನಗರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯು ಪರಿಪೂರ್ಣವಾಗಿರುವುದಿಲ್ಲ. ಆದ್ದರಿಂದ ಸದರಿ ಎಲ್ಲೆಯನ್ನು ವಿಸ್ತರಿಸಬೇಕೆಂದು ಪ್ರಾಧಿಕಾರದ ಅಧ್ಯಕ್ಷರು ಹಾಗೂ ಸದಸ್ಯರು ತಿಳಿಸಿರುತ್ತಾರೆ. ಈ ಬಗ್ಗೆ ಸದಸ್ಯ ಕಾರ್ಯದರ್ಶಿಗಳು ಪ್ರಸ್ತುತ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ಅಂತಿಮ ಮಹಾಯೋಜನೆ–2031ಕ್ಕೆ ಸರ್ಕಾರವು ದಿನಾಂಕ:18–08–2022 ರಂದು ಅನುಮೋದನೆ ನೀಡಿರುವುದಾಗಿ ಈ ಹಂತದಲ್ಲಿ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸಿ ಮಹಾಯೋಜನೆ ಸಿದ್ಧಪಡಿಸಲು ಆರ್ಥಿಕ ಹೊರೆಯಾಗುವುದಾಗಿ ತಿಳಿಸಿದರು. ಆದರೆ ಕುಶಾಲನಗರ ಸ್ಥಳಿಯ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅಭಿವೃದ್ಧಿಗೆ ಸಾಕಷ್ಟು ಜಾಗವಿಲ್ಲದ ಕಾರಣ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿ ಹೆಚ್ಚು ಅಭಿವೃದ್ಧಿಗಳು ಬರುತ್ತಿದ್ದು, ಯೋಜನಾ ಬದ್ಧವಾದ ಬೆಳವಣಿಗೆಗೆ ಹಾಗೂ ಉತ್ತಮವಾದ ರಸ್ತೆ ಪರಿಚಲನೆಗೆ ಮಹಾಯೋಜನೆಯು ಅತ್ಯಾವಶ್ಯಕವಾಗಿರುವುದರಿಂದ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸಲು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರು ಒಪ್ಪಿಗೆ ಸೂಚಿಸಿದರು. ಮುಂದುವರೆದು, ಸ್ಥಳೀಯ ಯೋಜನಾ ಪ್ರದೇಶವನ್ನು ಹಾಸನ ರಸ್ತೆಯಲ್ಲಿ ಕೂಡಿಗೆ ಮೇಲು ಸೇತುವೆವರೆಗೆ ಹಾಗೂ ಮಡಿಕೇರಿ ರಸ್ತೆಯಲ್ಲಿ ಆನೆಕಾಡು ಗ್ರಾಮದವರೆಗೆ, ಸಿದ್ದಾಪುರ ರಸ್ತೆಯಲ್ಲಿ ತೆಪ್ಪದಕಂಡಿವರೆಗೆ ಹಾಗೂ ಹಾರಂಗಿ ರಸ್ತೆಯಲ್ಲಿ ಬೊಳ್ಳೂರು ಗ್ರಾಮದವರೆಗೆ, ಚಿಕ್ಕತ್ತೂರು, ದೊಡ್ಡತ್ತೂರು ಗ್ರಾಮಗಳನ್ನು ಸೇರಿಸಿಕೊಂಡು ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ನಿರ್ಣಯ: ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸುವ ಕುರಿತು ಚರ್ಚಿಸಿದಂತೆ ಒಂದು ನಕ್ಷೆಯನ್ನು ಸಿದ್ಧಪಡಿಸಿ ಮುಂದಿನ ಪ್ರಾಧಿಕಾರದ ಸಭೆಗೆ ಮಂಡಿಸುವಂತೆ ಹಾಗೂ ನಕ್ಷೆ ಸಿದ್ಧಪಡಿಸಲು ತಗಲುವ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸಲು ಒಪ್ಪಿ ಅಗತ್ಯ ಕ್ರಮಕ್ಕೆಗೊಳ್ಳಲು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ